**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 222/2023**

ಚಾ.ಸಾ-14, ಪ್ರಾ.ಸಾ-05

| | | |
|---|---|---|
| ಹೆಸರು | : | ಮಹೇಶ್ ಬಿ. |
| ತಂದೆಯ ಹೆಸರು | : | ಲೇಟ್ ಬೆಳಪ್ಪ |
| ವಯಸ್ಸು | : | 62 |
| ವೃತ್ತಿ | : | ನಿವೃತ್ತ ಪೊಲೀಸ್ ನಿರೀಕ್ಷಕರು. |
| ವಾಸ | : | ಚಾಮರಾಜನಗರ. |

**ದಿನಾಂಕ 28.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

[

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಫೆಬ್ರವರಿ 2023 ರಿಂದ ಜುಲೈ 2023 ರವರೆಗೆ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ 15.02.2023 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗೆ ಪ್ರಾಸಾ-4 ರವರಿಂದ ಪಡೆದಿರುತ್ತೇನೆ.

ಅದೇ ದಿನ ಈ ಪ್ರಕರಣದ ಆರೋಪಿತರು ಮೈಸೂರಿನ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ನೀಡಿದ್ದ ಹೇಳಿಕೆಗಳಲ್ಲಿ ಕಂಡು ಬರುವಂತೆ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಂದು ಸದರಿ ಪೊಲೀಸ್ ಠಾಣೆಯವರು ನನಗೆ ತಿಳಿಸಿದರು.

ಅದೇ ದಿನ 1ನೇ ಆರೋಪಿತನನ್ನು ಮೈಸೂರಿನ ಕೇಂದ್ರ ಕಾರಾಗೃಹದಿಂದ ಈ ಪ್ರಕರಣದಲ್ಲಿ ಹಾಜರುಪಡಿಸಲು ಈ ನ್ಯಾಯಾಲಯದಿಂದ ಬಾಡಿ

ವಾರೆಂಟ್‌ನ್ನು ಪಡೆದುಕೊಂಡಿರುತ್ತೇನೆ. ಆ ಪ್ರಕಾರ ಆತನನ್ನು ದಿನಾಂಕ 21.02.2023 ರಂದು ಬಾಡಿ ವಾರೆಂಟ್ ನಡಿಯಲ್ಲಿ ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಅದೇ ದಿನ ಆರೋಪಿತನನ್ನು ಪೊಲೀಸ್ ಅಭಿರಕ್ಷೆಗೆ ಪಡೆದುಕೊಂಡಿರುತ್ತೇನೆ.

ನಂತರ ಆರೋಪಿತನ ಹೇಳಿಕೆ ಪಡೆದು ಆತನ ಸಮಕ್ಷಮ ಆತನು ತೋರಿಸಿದಂತೆ ಪಂಚರಾದ ಫ್ರಾಸಾ-3 ಮತ್ತು ಚಾಸಾ-5 ರವರ ಹಾಗೂ ಫ್ರಾಸಾ-1 ರವರ ಸಮಕ್ಷಮ ಪಂಚನಾಮವನ್ನು ಮಧ್ಯಾಹ್ನ 3.00 ರಿಂದ 4.00 ಗಂಟೆ ಸಮಯದಲ್ಲಿ ಜರುಗಿಸಲಾಯಿತು. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.3 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ಆ ವೇಳೆಗೆ ಸ್ಥಳದ ಭಾವಚಿತ್ರವನ್ನು ತೆಗೆಯಲಾಯಿತು. ಅದು ಈಗಾಗಲೇ ನಿಪಿ.4 ಎಂದು ಗುರುತಿಸಲ್ಪಟ್ಟಿದೆ.

ಅದೇ ದಿನ ಆ ಆರೋಪಿತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

ನಿಪಿ.4 ರ ಭಾವಚಿತ್ರದ ಕುರಿತು ತಿ. ನರಸೀಪುರ ಪೊಲೀಸ್ ಠಾಣೆಯ ಪೊಲೀಸ್ ಪೇದೆ ಸಂಖ್ಯೆ 268/ಮಹೇಂದ್ರ ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65-ಬಿ ರಡಿಯಲ್ಲಿ ದೃಢೀಕರಣ ಪತ್ರವನ್ನು ಪಡೆದಿರುತ್ತೇನೆ.

ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.7 ಮತ್ತು 7(ಎ) ಎಂದು ಗುರುತಿಸಲಾಯಿತು.

1ನೇ ಆರೋಪಿತನಿಂದ ಚಿನ್ನದ ಸರವನ್ನು ಪಡೆದಿದ್ದ ತಿ. ನರಸೀಪುರ ತಾಲ್ಲೂಕಿನ ಬೇವಿನ ಹಳ್ಳಿ ಗ್ರಾಮದ ಶಿವಪ್ರಕಾಶ್ ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ 26.03.2023 ರಂದು ಚಾಸಾ-12 ರವರಿಂದ ಮೈಸೂರಿನ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ 64/2022 ರ ದಾಖಲೆಗಳನ್ನು ಪಡೆದುಕೊಂಡು ಈ ಪ್ರಕರಣಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ 04.06.2023 ರಂದು ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 2ನೇ ಆರೋಪಿತನ ಪರವಾಗಿ</u>**

1ನೇ ಆರೋಪಿತನ ಸ್ವ ಹೇಳಿಕೆಯ ಆಧಾರದ ಮೇಲೆ 2ನೇ ಆರೋಪಿತನ ವಿರುದ್ಧವು ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿದೆ. 2ನೇ ಆರೋಪಿತನ ವಿರುದ್ಧ ಯಾವುದೇ ಆರೋಪವಿಲ್ಲದೆ ಇದ್ದರೂ ಕೂಡ ಆತನ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 222/2023**

ಚಾ.ಸಾ–06, ಪ್ರಾ.ಸಾ–06

| | | |
|---|---|---|
| ಹೆಸರು | : | ಅಭಿಷೇಕ್ |
| ತಂದೆಯ ಹೆಸರು | : | ಶಿವನಂಜೇಗೌಡ |
| ವಯಸ್ಸು | : | 33 |
| ವೃತ್ತಿ | : | ಖಾಸಗಿ ಕೆಲಸ |
| ವಾಸ | : | ಮೈಸೂರು |

**ದಿನಾಂಕ 28.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಕಳೆದ 2–3 ವರ್ಷಗಳ ಹಿಂದೆ ಬೆಳಿಗ್ಗೆ 9.30 ರಿಂದ 10.00 ಗಂಟೆ ಸಮಯದಲ್ಲಿ ಮೈಸೂರಿನ ಜಯಲಕ್ಷ್ಮೀಪುರಂ ಪೊಲೀಸರು ನನ್ನನ್ನು ಪಂಚನಾಮ ಮಾಡಲು ಕರೆದಿದ್ದರು. ಆ ವೇಳೆಗೆ ಸಂಖ್ಯೆಯ ಫಲಕವಿಲ್ಲದ ಮಂಜ ಅಲಿಯಾಸ್ ಕಳ್ಳಮಂಜ ಎನ್ನುವವರಿಗೆ ಸೇರಿದ್ದ ಮೋಟಾರ್ ಸೈಕಲ್‌ನ್ನು ಪೊಲೀಸರು ನಿಲ್ಲಿಸಿ ಭಾವಚಿತ್ರವನ್ನು ತೆಗೆದು ಪಂಚನಾಮ ಜರುಗಿಸಿರುತ್ತಾರೆ. ಆ ವೇಳೆಗೆ ಸದರಿ ಮಂಜ ಅಲಿಯಾಸ್ ಕಳ್ಳಮಂಜ ಮತ್ತು ಚಾಸಾ–12 ರವರು ಇದ್ದರು.

ಸದರಿ ಪೊಲೀಸರು ನನ್ನನ್ನು ಮತ್ತು ಚಾಸಾ–7 ರವರನ್ನು ಹೊರಗಿನ ಜಾಗಕ್ಕೆ ಚಿನ್ನದ ಸರವನ್ನು ಜಪ್ತಿಮಾಡಲು ಕರೆದುಕೊಂಡು ಹೋಗಿದ್ದರು. ಆ ಸ್ಥಳದಲ್ಲಿ ಪೊಲೀಸರು ಆ ಚಿನ್ನದ ಸರವನ್ನು ಜಪ್ತಿಪಡಿಸಿ, ಪಂಚನಾಮವನ್ನು ಬರೆದಿರುತ್ತಾರೆ.

ಸದರಿ ಪಂಚನಾಮದ ದೃಢೀಕೃತ ಪ್ರತಿಯನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ.8 ಎಂದು ಗುರುತಿಸಲಾಯಿತು. ಅದು ದೃಢೀಕೃತ ಪ್ರತಿಯಾಗಿರುವುದರಿಂದ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಗುರುತಿಸಿರುವುದಿಲ್ಲ.

ಸದರಿ ಮಂಜ ಅಲಿಯಾಸ್ ಕಳ್ಳಮಂಜ ರವರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶಃ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶಃ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶಃ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 01.12.2022 ರಂದು ಬೆಳಿಗ್ಗೆ 9.30 ರಿಂದ 10.10 ಗಂಟೆ ಸಮಯದಲ್ಲಿ ಪೊಲೀಸರು ನನ್ನ ಮತ್ತು ಚಾಸಾ-7 ರವರ ಸಮಕ್ಷಮ ಶಿವಪ್ರಕಾಶ್ ಎನ್ನುವವರು ಹಾಜರುಪಡಿಸಿದ್ದ ಚಿನ್ನದ ಸರ ಮತ್ತು ಕೊಳವೆಗಳನ್ನು ಜಪ್ತುಪಡಿಸಿ, ನಿಪಿ.8 ರಂತೆ ಪಂಚನಾಮ ಜರುಗಿಸಿರುತ್ತಾರೆ ಎಂದರೆ ಸರಿ.

ಸಿಸಿ ಸಂಖ್ಯೆ 222/2023

**ಪಾಟೀ ಸವಾಲುಃ ಶ್ರೀ. ಎಂ. ಆರ್ ಆರೋಪಿತರ ಪರ ವಕೀಲರಿಂದಃ**

ಪಂಚನಾಮದ ವಿವರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರ ಹೇಳಿಕೆಯಂತೆ ನಾನು ಪಂಚನಾಮಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಪಂಚರಾಗಿ ಹೋಗಲು ಅವರು ನನಗೆ ನೋಟಿಸು ನೀಡಿರಲಿಲ್ಲ. 2ನೇ ಆರೋಪಿತ ಯಾರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಪಂಚನಾಮಕ್ಕೆ ಸದರಿ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**